



◆ **ನಮ್ಮ ದೇಶದ ಉದ್ದಗಲಕ್ಕೂ ಇರುವ ಕಲಾಪ್ರಕಾರಗಳ ಬಗ್ಗೆ ಆಸಕ್ತಿ ಹೊಂದಿರುವ ನೀವು, ನೃತ್ಯಪ್ರಕಾರಗಳ ವಿಕಾಸ, ಸ್ಥಿತಿಗತಿಯ ಬಗ್ಗೆ ಅನೇಕ ಬರಹಗಳನ್ನು ಬರೆದಿರುವಿರಿ. ಕಲಾ ವಿಮರ್ಶಕರಾಗಿ ಗುರುತಿಸಿಕೊಂಡಿದ್ದೀರಿ. ನೀವು ಗಮನಿಸಿದಂತೆ ಭಾರತದಲ್ಲಿ ಪ್ರಧಾನವಾಗಿ ಗೋಚರಿಸುತ್ತಿರುವ ನೃತ್ಯ ಪ್ರಕಾರ ಎಂದು ಯಾವುದನ್ನು ಗುರುತಿಸಬಹುದು?**

ನಮ್ಮ ದೇಶದಾದ್ಯಂತ ಪ್ರಚಲಿತವಾಗಿರುವ ಮತ್ತು ಜನಪ್ರಿಯವಾಗಿರುವ ನೃತ್ಯ ಪ್ರಕಾರಗಳನ್ನು ಗಮನಿಸಿದರೆ, ಭರತನಾಟ್ಯವೇ ಪ್ರಧಾನವಾದುದಾಗಿದೆ. ಯಾವುದೇ ಶಾಸ್ತ್ರೀಯ ನೃತ್ಯವನ್ನು ಕಲಿಯುವುದಕ್ಕೆ ಮುನ್ನ ಪ್ರವೇಶ ರೂಪದಲ್ಲಿ ಭರತನಾಟ್ಯ ಕಲಿಯುವುದು ವಾಡಿಕೆಯಾಗಿದೆ. ಭರತನಾಟ್ಯದ ಇನ್ನೊಂದು ಸಕಾರಾತ್ಮಕ ಅಂಶವೆಂದರೆ, ಅದು ನಮ್ಮ ಪೂರ್ವಿಕರ ಪರಂಪರೆಯನ್ನು ನೆನಪಿಸುವ ರೀತಿಯಲ್ಲಿ ಉಳಿದುಕೊಂಡು ಬಂದಿದೆ. ಇತರ ನೃತ್ಯ ಪ್ರಕಾರಗಳಾದ ಕಥಕ್, ಮಣಿಪುರಿ ಅಥವಾ ಸತ್ರಿಯಾ ಆಯಾ